RNU AIR DHARWAD

JULY 13, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಬೆಳಗಾವಿ ಜಿಲ್ಲೆ, ನಿಪ್ಪಾಣಿಯಲ್ಲಿ,** 3 ಕೋಟಿ 25 ಲಕ್ಷ ರೂಪಾಯಿ ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಳ್ಳಲಿರುವ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದ ಕಾಮಗಾರಿಗೆ, ಲೋಕೋಪಯೋಗಿ ಖಾತೆ ಸಚಿವ, ಸತೀಶ ಜಾರಕಿಹೊಳಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಶೌರ್ಯ ಮತ್ತು ತ್ಯಾಗಕ್ಕೆ ಗೌರವ ಸಲ್ಲಿಸುವ ಉದ್ದೇಶದಿಂದ, ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ನಿಪ್ಪಾಣಿ ನಗರದ ಸೌಂದರ್ಯ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ, ಈ ಯೋಜನೆ, ಮಹತ್ವದ ಕೊಡುಗೆಯಾಗಲಿದೆ ಎಂದು ಸಚಿವರು ಹೇಳಿದರು.

<><><>

**ಹಿರಿಯ ರಾಜಕಾರಣಿ, ಮಾಜಿ ರಾಜ್ಯಸಭಾ** ಸದಸ್ಯ ಎಚ್. ಹನುಮಂತಪ್ಪ ಅವರ ನಿಧನಕ್ಕೆ, ಸಂಸದ ಗೋವಿಂದ ಎಮ್. ಕಾರಜೋಳ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಚಿತ್ರದುರ್ಗದ ನಿವಾಸದಲ್ಲಿ ಎಚ್. ಹನುಮಂತಪ್ಪ ಅವರ ಪಾರ್ಥಿವ ಶರೀರದ ದರ್ಶನ ಪಡೆದು, ಅಂತಿಮ ನಮನ ಸಲ್ಲಿಸಿದರು. ಸಾಮಾನ್ಯ ಕುಟುಂಬದಿಂದ ಬಂದ ಹನುಮಂತಪ್ಪನವರು, ಕಠಿಣ ಪರಿಶ್ರಮದ ಮೂಲಕ ಬೆಳೆದು, ತಮ್ಮ ಜೀವನವನ್ನು ಸಮಾಜ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಮುಡುಪಾಗಿಟ್ಟಿದ್ದರು ಎಂದು ಸ್ಮರಿಸಿದರು. ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಉಪ ಮುಖ್ಯಮಂತ್ರಿ ಡಾಕ್ಟರ ಜಿ. ಪರಮೇಶ್ವರ, ಕೆ.ಪಿ.ಸಿ.ಪಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ ಸೇರಿದಂತೆ ಗಣ್ಯರು, ಹನುಮಂತಪ್ಪ ಅವರ ನಿಧನಕ್ಕೆ ಕಂಬನಿ ಮಿಡಿದಿದ್ದು, ಸಂತಾಪ ಸೂಚಿಸಿದ್ದಾರೆ. ಚಿತ್ರದುರ್ಗ ಜಯದೇವ ಕ್ರೀಡಾಂಗಣದಲ್ಲಿ, ಪಾರ್ಥೀವ ಶರೀರದ ಸಾರ್ವಜನಿಕ ದರ್ಶನದ ವ್ಯವಸ್ಥೆ ಮಾಡಲಾಗಿದೆ. ಸಾಯಂಕಾಲ 4 ಗಂಟೆಗೆ ನಗರದ ಮುಕ್ತಿಧಾಮದಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ.

<><><>

**ಕೇಂದ್ರ ಸರ್ಕಾರ ಹಾಗೂ ಸಂಬಂಧಪಟ್ಟ** ಇಲಾಖೆ, ಅಡಿಕೆ ಬೆಳೆಗಾರರ ಹಿತರಕ್ಷಣೆಗೆ ಬದ್ಧವಾಗಿದೆ. ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ತಡೆಯಲಾಗಿದ್ದ ಅಡಿಕೆ ಸಾಗಣೆ ವಾಹನಗಳ ಕುರಿತು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ ನೇತೃತ್ವದಲ್ಲಿ, ಹೊಸದಿಲ್ಲಿಯಲ್ಲಿ ನಿಯೋಗ ಮಟ್ಟದ ಮಾತುಕತೆ ಯಶಸ್ವಿಯಾಗಿ ನಡೆದು, ಪರಿಹಾರ ಕಂಡುಕೊಳ್ಳಲಾಗಿದೆ ಎಂದು ಸಂಸದ ಬಿ. ವೈ ರಾಘವೇಂದ್ರ ಹೇಳಿದರು. ಶಿವಮೊಗ್ಗದ ಪ್ರವಾಸಿ ಮಂದಿರದಲ್ಲಿ ಅಡಿಕೆ ಬೆಳೆಗಾರರು, ವರ್ತಕರು ಹಾಗೂ ಸಹಕಾರಿ ಸಂಸ್ಥೆ ಪದಾಧಿಕಾರಿಗಳೊಂದಿಗೆ ಆಯೋಜಿತ, ಸಮಾಲೋಚನಾ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

<><><>

**ಇಂದು ಕೇಂದ್ರ ಸಾಹಿತ್ಯ ಅಕಾದೆಮಿ** ಪ್ರಶಸ್ತಿ ಪುರಸ್ಕೃತ, ಸಾಹಿತಿ ರಂಗನಾಥ ಶಾಮಾಚಾರ್ಯ ಲೋಕಾಪುರ–ರಂ.ಶಾ ಅವರ ಜನ್ಮದಿನ. 2006 ನೇ ಸಾಲಿನಲ್ಲಿ ಅವರು ಅನುವಾದಿಸಿದ 'ಕನ್ನಡ ಜ್ಞಾನೇಶ್ವರಿ' ಕೃತಿಗೆ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಸಂದಿತ್ತು. ರಂ.ಶಾ ಅವರ 94 ನೇ ಜಯಂತಿ ಹಿನ್ನೆಲೆ, ಪ್ರಸ್ತುತ ಧಾರವಾಡದ ಜಿ.ಬಿ ಜೋಶಿ ಸ್ಮಾರಕ ಟ್ರಸ್ಟ್ ವತಿಯಿಂದ, ನಗರದ ಮನೋಹರ ಗ್ರಂಥಮಾಲಾ ಅಟ್ಟದಲ್ಲಿ ಉಪನ್ಯಾಸ ಕಾರ್ಯಕ್ರಮ ಆಯೋಜಿತವಾಗಿದೆ.

<><><>

**ಕೇಂದ್ರ ಪುರಸ್ಕೃತ,** ರಾಷ್ಟ್ರೀಯ ವಯೋಶ್ರೀ ಯೋಜನೆ ಅಡಿ, ಚಿತ್ರದುರ್ಗ ಜಿಲ್ಲೆಯ 986 ಫಲಾನುಭವಿಗಳಿಗೆ, 84 ಲಕ್ಷ 84 ಸಾವಿರ ರೂಪಾಯಿ ವೆಚ್ಚದ, 4 ಸಾವಿರದ 4 ನೂರಾ 71 ಸಾಧನ ಸಲಕರಣೆಗಳನ್ನು, ಶೀಘ್ರ ವಿತರಿಸಲಾಗುವುದು ಎಂದು, ಸಂಸದ ಗೋವಿಂದ ಕಾರಜೋಳ ತಿಳಿಸಿದ್ದಾರೆ. ಚಿತ್ರದುರ್ಗದಲ್ಲಿ ಮಾತನಾಡಿದ ಅವರು, ಹಿರಿಯ ನಾಗರಿಕರ ಬದುಕು, ಸುಗಮ ಹಾಗೂ ಸ್ವಾಭಿಮಾನದಿಂದ ಕೂಡಿರುವಂತೆ, ನೋಡಿಕೊಳ್ಳುವುದು, ಕೇಂದ್ರದ ಆದ್ಯತೆಯಾಗಿದೆ, ಎಂದರು. ಹಿರಿಯರ ಸಹಾಯವಾಣಿ, 1–4–5–6–7ರ ಬಳಕೆಯ ಬಗ್ಗೆಯೂ, ಸಂಸದರು ಮಾಹಿತಿ ನೀಡಿದರು.

<><><>

**ಕೊಡಗಿನ ಕುಶಾಲನಗರದಿಂದ,** 190 ಕಿಲೋ ಮೀಟರ್ ದೂರದ, ಮಂಗಳೂರು ಬಂದರಿಗೆ, ನಿತ್ಯ ನೂರು ಕಂಟೇನರ್‌ಗಳಂತೆ, ವರ್ಷಕ್ಕೆ 15 ಸಾವಿರ ಕಂಟೇನರ್‌ಗಳಲ್ಲಿ ಕಾಫಿ ಬೀಜ ಸರಬರಾಜಾಗುತ್ತಿದೆ ಎಂದು, ಕೂರ್ಗ್ ಪ್ಲಾಂಟರ್ಸ್ ಅಸೋಸಿಯೇಷನ್ ವಕ್ತಾರ, ಕೆ.ಕೆ. ವಿಶ್ವನಾಥ, ತಿಳಿಸಿದ್ದಾರೆ.

ನವ ಮಂಗಳೂರು ಬಂದರು ಸಂಸ್ಥೆಯ ಅಧ್ಯಕ್ಷ, ಸುಶೀಲಕುಮಾರ ಸಿಂಗ್ ಅಧ್ಯಕ್ಷತೆಯಲ್ಲಿ, ಕೊಡಗು ಜಿಲ್ಲೆ, ವಾಣಿಜ್ಯೋದ್ಯಮ ಸಂಸ್ಥೆ ನಿಯೋಗದೊಂದಿಗೆ, ಮಡಿಕೇರಿಯಲ್ಲಿ ನಡೆದ ಸಭೆಯಲ್ಲಿ ಅವರು, ಮಾತನಾಡಿದರು.

<><><>

**ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು** ತಾಲೂಕು, ಕೋನಾಪುರ ಗ್ರಾಮದ ಸಮೀಪ ರಾಷ್ಟ್ರೀಯ ಹೆದ್ದಾರಿ 150–ಎ ಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಇಬ್ಬರು ಸಾವನ್ನಪ್ಪಿದ್ದು, 28 ಜನ ಗಾಯಗೊಂಡಿದ್ದಾರೆ. ಮೃತಪಟ್ಟ ಓರ್ವರನ್ನು, ಚಾಲಕ 45 ವರ್ಷದ ಮೊಹಮ್ಮದ್ ಯಾಯ್ ಎಂದು ಗುರುತಿಸಲಾಗಿದೆ. ಗಾಯಗೊಂಡವರನ್ನು ಸಮೀಪದ ರಾಂಪುರ ಹಾಗೂ ಬಳ್ಳಾರಿಯ ಮಿಮ್ಸ್ ಆಸ್ಪತ್ರೆಗಳಿಗೆ ದಾಖಲಿಸಲಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ರಾಂಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

<><><>

**ಹಾವೇರಿ ಸರ್ಜಿ ರೇಣುಕಾ ದೇವಧರ** ಆಸ್ಪತ್ರೆಯ, ನೂತನ ಕಾರ್ಡಿಯಾಕ್ ಕ್ಯಾಥ ಲ್ಯಾಬ್ ಸೇವೆಯನ್ನು, ವಿಧಾನ ಪರಿಷತ್ ಶಾಸಕ, ಡಾಕ್ಟರ ಧನಂಜಯ ಸರ್ಜಿ ಉದ್ಘಾಟಿಸಿದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>